ಮಾರನೇ ದಿನ ಚುಚ್ಚುಮದ್ದು ಚುಚ್ಚಿಸಿಕೊಳ್ಳುವ ತರಗತಿಯ ಅರ್ಧಕರ್ಧ ಮಕ್ಕಳಿಗೆ ಜ್ವರ ಬಂದು ಗೈರು ಹಾಜರಿ. ಆದರೆ ಅನಿವಾರ್ಯ ಕಾರಣಗಳಿಂದ ಆ ದಿನ ಗೈರು ಹಾಜರಾದವರು ಮಾತ್ರ ನಮ್ಮ ಕಣ್ಣಲ್ಲಿ ಮಹಾನ್ ಪುಣ್ಯವಂತರು ಅಂತನ್ನಿಸಿಕೊಳ್ಳುತ್ತಿದ್ದರು. ಇನ್ನು ಲಸಿಕೆ ಹಾಕುವ ಕಾರ್ಯಕ್ರಮ ಶುರುವಾದಾಗ ಒಂದೊಂದೇ ತರಗತಿಯ ಹುಡುಗರನ್ನು ಬೇರೆ ಸಾಲು, ಹುಡುಗಿಯರನ್ನು ಬೇರೆ ಸಾಲು ಮಾಡಿ ನಿಲ್ಲಿಸಿ ಸರದಿಯಂತೆ ಒಬ್ಬೊಬ್ಬರನ್ನೇ ಸೂಜಿ ಹಿಡಿದು ನಿಂತ ನರ್ಸಮ್ಮ ಇರುವ ತರಗತಿಯ ಕೋಣೆಯೊಳಗೆ ಬಿಡುತ್ತಿದ್ದರು. ಕೆಲ ಮಕ್ಕಳ ಚಡ್ಡಿ ಅದಾಗಲೇ ಒದ್ದೆಯಾಗಿ ಬಿಟ್ಟಿರುತ್ತಿತ್ತು. ಇನ್ನು ಕೆಲ ಮಕ್ಕಳ ಮುಸಿ ಮುಸಿ ಅಳು ಮಂದವಾಗಿ ಏರುತ್ತಾ ತಾರಕಕ್ಕೇರಿ ಬಿಡುತ್ತಿತ್ತು. ಆದರೆ ಇದ್ಯಾವ ಸಬೂಬುಗಳು ಇಂಜೆಕ್ಷನ್ನಿಂದ ನಾವು ತಪ್ಪಿಸಿಕೊಳ್ಳಲು ಸಹಾಯವಾಗುತ್ತಿರಲಿಲ್ಲ. ಇನ್ನು ಚುಚ್ಚಿಸಿಕೊಂಡ ಮಕ್ಕಳು ಕಣ್ಣಲ್ಲಿ ದಳ ದಳ ಅಂತ ನೀರಿಳಿಸಿಕೊಂಡು ಬರುವ ಅವರೊಂದಿಗೆ ಮೆಲ್ಲನೆ ನೋವಾಗ್ತದಾ... ಅಂತ ಕೇಳಿದರೆ ಅಳುವೇ ಅವರ ಉತ್ತರವಾದಾಗ ಮಾತ್ರ ನಮ್ಮಲ್ಲಿ ಆಗಲೇ ನಡುಕ ಹುಟ್ಟಿ, ಚುಚ್ಚಿಸಿಕೊಳ್ಳುವುದಕ್ಕಿಂತ ಮೊದಲೇ ನೋವು ಉಲ್ಬಣಾವಸ್ಥೆಗೆ ತಲುಪುತ್ತಿತ್ತು. ಇನ್ನು ನಮ್ಮ ನಮ್ಮ ಸರದಿ ಬಂದಾಗ ನರ್ಸಮ್ಮ ಒಂದು ಕೈಯಲ್ಲಿ ಸೂಜಿ ಹಿಡಿದುಕೊಂಡು ಮತ್ತೊಂದು ಕೈಯಿಂದ ಹತ್ತಿ ಚೂರಿನಿಂದ ಚರ್ಮಕ್ಕೆ ಮೃದುವಾಗಿ ಉಜ್ಜುತ್ತಾ ಕರುಣೆಯೇ ಮೂರ್ತಿವೆತ್ತ ದೇವತೆಯಂತೆ ಆದಷ್ಟೂ ಮೆಲು ಸ್ವರದಲ್ಲಿ ನಿನ್ನ ಹೆಸರೇನು? ನಿನ್ನ ಅಮ್ಮ ಯಾರು? ನಿನ್ನ ಅಪ್ಪನ ಹೆಸರೇನು ಅಂತ ಕೇಳುವಷ್ಟರಲ್ಲಿ ಸೂಜಿ ಒಳ ಹೊಕ್ಕು ಬಂದಾಗಿರುತ್ತಿತ್ತು. ಮತ್ತೆ ನರ್ಸಮ್ಮನಿಗೆ ಕೇಳಲು ಯಾವ ಪ್ರಶ್ನೆಗಳೇ ಇರುತ್ತಿರಲಿಲ್ಲ. ಇನಿತು ನೋವೇ ಆಗದಂತೆ ಚುಚ್ಚಿದರೂ ಸೂಜಿ ಚುಚ್ಚಿಸಿಕೊಳ್ಳುವ ಕಲ್ಪನೆಯೇ ನಮ್ಮಲ್ಲಿ ಭೀತಿ ಹುಟ್ಟಿಸಿ ಅಳು ಉಕ್ಕುತ್ತಿತ್ತು. ಮತ್ತೆ ಆ ಅಳು ಸಾಂಕ್ರಾಮಿಕದಂತೆ ಹಬ್ಬುತ್ತಿತ್ತು ಕೂಡ. ಆ ದಿನ ಜ್ವರ ಬಂದರೆ ಮಾತ್ರ ತಿನ್ನಿ ಅಂತ ಒಂದು ಮಾತ್ರೆಯನ್ನು ಕೊಡುತ್ತಿದ್ದರು. ಸಾಮಾನ್ಯವಾಗಿ ಆ ದಿನ ಹೆಚ್ಚಿನವರಿಗೆ ಕಳ್ಳ ಜ್ವರವೊಂದು ಬಂದು ರಜೆಗೊಂದು ನೆವ ಸಿಗುತ್ತಿತ್ತು. ಆದರೆ ಒಮ್ಮೆಯಂತೂ ನರ್ಸಮ್ಮ ಕಕ್ಕುಲಾತಿಯಿಂದ ವಿಚಾರಿಸಿಕೊಂಡು ಚುಚ್ಚಿದ ಸೂಜಿ ಇಬ್ಬರು ಮಕ್ಕಳಿಗೆ ಅಸಾಧ್ಯ ನೋವು ತರಿಸಿ ಅವರಿಗೆ ಕೂರಲು ನಿಲ್ಲಲು ಆಗದಂತೆ ಕಾಡಿದಾಗ ಗಾಬರಿ ಬಿದ್ದು ಅವರನ್ನು ವೈದ್ಯರಲ್ಲಿಗೆ ಕರೆದುಕೊಂಡು ಹೋದರೆ ಸಣ್ಣ ಸೂಜಿ ಮೊನೆಯ ತುಂಡು ಮಾಂಸದೊಳಗೆ ಉಳಿದು ಬಿಟ್ಟಿತ್ತಂತೆ. ಮಕ್ಕಳ ಹೇಳಿಕೆಯಲ್ಲಿ ಎಷ್ಟು

